‘ನನಗೆ ಆಸಕ್ತಿಯಿಲ್ಲ ಅಂದೆನಲ್ಲ... ಅವರಿಗೆ ಸಿಗಬೇಕು. ನಿಮ್ಮಪ್ಪನ ಗೆಳೆಯರು ನನ್ನ ಮನೆಗೆ ನ್ಯಾಯ ಕೇಳಲು ಬಂದಿದ್ದ ಪ್ರಕರಣ ನೆನಪಿದೆಯಲ್ಲ, ಸ್ವಾರಸ್ಯಕರ ವಿಷಯ ಹೇಳ್ತೇನೆ, ಕೇಳಿ. ಅವರು ಮರುದಿನ ಬಂದು ರಂಗನಾಥರಲ್ಲಿ ಕಂಪ್ಲೇಂಟು ಕೊಟ್ಟಿದ್ದರು. ನೀವಿದನ್ನೂ ತಿಳ್ಕೊಳ್ಳಬೇಕು, ಆಮೇಲೆಯೇ ರಂಗನಾಥರನ್ನು ಅರ್ಥಮಾಡಿಕೊಳ್ಳುತ್ತೀರಿ. ದಲಿತನಿಗೆ ಬೈದ ಕಂಪ್ಲೇಂಟು. ಪೊಲೀಸರಲ್ಲಿ ಹೋಗಿದ್ದರೆ ನನ್ನ ಉದ್ಯೋಗಕ್ಕೇ ಸಂಚಕಾರ ಬರುತ್ತಿತ್ತೋ ಏನೋ. ರಂಗನಾಥರು ನಿಮ್ಮಪ್ಪನನ್ನೂ ಅವರನ್ನೂ, ನನ್ನನ್ನೂ ಕರೆಸಿ ಸಂಧಾನಕ್ಕೆ ಕೂರಿಸಿದರು. ಅವರೆದುರಲ್ಲಿ ನನಗೆ ಬೈದರು. ನಮ್ಮ ಶಾಲೆಯ ಶಿಕ್ಷಕ, ವಿದ್ಯಾರ್ಥಿಯೋರ್ವನ ಪಾಲಕರಲ್ಲಿ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ಮೊದಲಬಾರಿ ಮಾಡಿದ ತಪ್ಪು ಎಂದು ಮಾಫಿ ಮಾಡಿದ್ದೇನೆ, ಇನ್ನು ಮುಂದೆ ಜಾಗ್ರತೆಯಾಗಿರಿ ಎಂದು ನನಗೆ ವಾರ್ನಿಂಗ್ ಕೊಟ್ಟ ನಟನೆ ಮಾಡಿದರು. ಕಂಪ್ಲೇಂಟ್ ಕೊಟ್ಟವರಿಗೆಲ್ಲ ಸಂತೃಪ್ತಿಯಾಯಿತು. ಬಂದವರನ್ನೆಲ್ಲ ನಗುಮುಖದೊಂದಿಗೆ ಸಾಗಹಾಕಿದರು. ಆಮೇಲೆ ನಿಮ್ಮಪ್ಪನನ್ನು ಕರೆದು, ‘ನಿನಗೆ ತಲೆಯಲ್ಲೇನು ಸೆಗಣಿ ಇದೆಯಾ? ಮಗನ ಏಳಿಗೆ ಮುಖ್ಯ ಅಲ್ಲ ನಿನಗೆ... ಸುಡುಗಾಡು ಜಾತಿ ಮರ್ಯಾದೆ ಮುಖ್ಯ. ಅವರೆಲ್ಲ ನಿನಗೆ ಬೇಕಾದವರು. ಹಗಲೆಲ್ಲ ನಮಗೆ ಅನ್ಯಾಯವಾಗಿದೆ ಅಂತ ಬೊಬ್ಬೆ ಹಾಕುತ್ತ ತಿರುಗುವುದು, ಸಂಜೆಯಾಗುತ್ತಲೇ ಕುಡಿಯುವುದು, ಬಿದ್ದುಕೊಳ್ಳುವುದು... ಇದೇ ಅವರ ಗಿರ್ಕಿ... ಅವರೊಂದಿಗೆ ನೀನೂ ಸೇರ್ಕೊಂಡು ಹಾಳಾಗಿ ಹೋಗ್ತೀಯಾ... ಗಣೇಶ ಭಟ್ರು ನಮ್ಮ ಶಾಲೆಯ ಒಳ್ಳೆಯ ಶಿಕ್ಷಕರು. ಏನೆಲ್ಲ ಉಪಾಯ ಮಾಡಿ ಅವರು ನಿನ್ನ ಮಗನಿಗೂ ಪಾಠ ಹೇಳಿಕೊಡುವಂತೆ ನೋಡಿಕೊಂಡಿದ್ದೇನೆ. ನಿನ್ನ ಮಗ ಕಲಿಯಲಿ ಎನ್ನುವ ಉದ್ದೇಶದಿಂದ. ಹುಡುಗನ ಭವಿಷ್ಯದಲ್ಲಿ ಆಟವಾಡಬೇಡ. ನಾನು ಬಿಡಲಾರೆ... ಕುಡುಕ ನೀನು... ಅವರು ಹಾಗೆ ಹೇಳಿದ್ದು ತಪ್ಪಾ? ನಾನೂ ದಲಿತನೇ... ನಿನ್ನ ಹಾಗೆಯೇ ಇದ್ದೀನಾ? ಮುಖ್ಯೋಪಾಧ್ಯಾಯನಾಗಿದ್ದೇನೆ. ನಿನ್ನ ಮಗ ನಾಳೆ ನನ್ನ ಹಾಗೆ ಆಗಬೇಕು... ನನಗಿಂತಲೂ ಮೇಲೆ ಏರಬೇಕು. ನಿನ್ನ ಹಾಗೆ ಅಲ್ಲ... ಗೊತ್ತಾಯ್ತಾ? ಯಾರು ನಮಗೆ ಸಹಾಯ ಮಾಡುತ್ತಾರೆ, ಯಾರು ನಮ್ಮನ್ನು ದಾಳಗಳಾಗಿ ಉಪಯೋಗಿಸಿಕೊಳ್ಳುತ್ತಾರೆ ಎನ್ನುವುದನ್ನು ಅರಿತು ವ್ಯವಹರಿಸಬೇಕು. ಗೊತ್ತಾಯ್ತಾ?’ ಅಂತ ಛೀಮಾರಿ ಹಾಕಿ ಕಳಿಸಿ ಕೊಟ್ಟಿದ್ದರು. ಆಮೇಲೆ ನನ್ನನ್ನು ಕೂರಿಸಿ, ‘ನೀವು ಇಷ್ಟೆಲ್ಲ ಕಲಿತವರು. ಕಾನೂನಿನ ಪ್ರಜ್ಞೆ ಬೆಳೆಸಿಕೊಳ್ಳಿ. ಜಮೀನುದಾರರು, ಮೇಲ್ವರ್ಗದ ಇನ್ನಿತರರು ದಲಿತ ಶೋಷಣೆ ಮಾಡದಿರಲಿ ಅಂತ ಸರಕಾರ ಮಾಡಿದ ಕಾನೂನುಗಳು ಬಹಳ ಸ್ಟ್ರಾಂಗಾಗಿವೆ. ವಿವೇಚನೆಯಿಲ್ಲದೆ ಕೋಪದಲ್ಲಿ ಏನೇನೋ ಹೇಳಿ ನೀವು ಇದರಲ್ಲೆಲ್ಲ ಸಿಕ್ಕಿ ಹಾಕಿಕೊಳ್ಳಬಾರದು’ ಎಂದು ನನಗೂ ಉಪದೇಶ ನೀಡಿ ಕಳುಹಿಸಿದ್ದರು. ರಂಗನಾಥರು ಹಾಗೆ... ಅವರಿಗೆ ದಲಿತರ ಹಿತ ಎಲ್ಲಿದೆ ಎನ್ನುವುದರ ಅರಿವಿತ್ತು. ಪ್ರಶಸ್ತಿ ಕೊಡಿಸಲಾಗದಿದ್ದರೂ ಚಿಂತೆಯಿಲ್ಲ, ನೀವೊಮ್ಮೆ ಅವರನ್ನು ಭೇಟಿಯಾಗಿ... ದಲಿತ ವಿದ್ಯಾರ್ಥಿಯೊಬ್ಬನ ಏಳಿಗೆ ಕಂಡು ಅವರಿಗೆ ಸಂತೋಷವಾಗುತ್ತದೆ. ಅವರೊಡನೆ ಅರ್ಧ ಗಂಟೆ ಮಾತಾಡಿದರೆ ದಲಿತರ ಏಳಿಗೆಯ ನಿಮ್ಮ ಚಿಂತನೆಗಳು ಹೇಗೆ ಬದಲಾಗುತ್ತವೆ ನೋಡಿ. ಅವರಿಗೆ ಸಿಕ್ಕಿದರೆ ಅದು ಸಾರ್ಥಕ ಪ್ರಶಸ್ತಿ’ ಮಾಸ್ತರರು ಭಾವುಕರಾಗಿದ್ದರು.

‘ಸರ್... ಅವರೆಲ್ಲಿದ್ದಾರೆ?’ ಕೇಳಿದರು ದಾಮೋದರ್.

‘ಇಲ್ಲೇ ಶಾಲೆಯ ಪಕ್ಕದ ಛತ್ರದಲ್ಲಿ ಬಾಡಿಗೆಕೋಣೆ ಪಡೆದು ಅಲ್ಲಿ ವಾಸವಾಗಿದ್ದಾರೆ. ಮೊದಲೊಮ್ಮೆ ಮಗನೊಂದಿಗೆ ಇರಲು ಬೆಂಗಳೂರಿಗೆ ಟ್ರಾನ್ಸ್‌ಫರ್ ತೆಗೆದುಕೊಂಡರು. ಜಾತಿ ಮೀಸಲಾತಿಯ ಪ್ರಯೋಜನ ಪಡೆದು ಜೀವನ ಮಟ್ಟ ಸುಧಾರಿಸಿಕೊಂಡವರು ಮತ್ತೂ ಮತ್ತೂ